ಹಾಕಲು ಹೆಚ್ಚು ಹೊತ್ತು ಆಗದು. ಎಲ್ಲವೂ ಗೋಜಲುಮಯ. ಯಾವ ಪ್ರಶ್ನೆಗೂ ತಕ್ಷಣ ಉತ್ತರ ದೊರೆಯದು ಎಂದು ಗೊತ್ತಾದಾಗ ಶಿವಣ್ಣ ಅಲ್ಲಿಂದ ಹೊರಟ. ಆಗಲೇ ಪತ್ರಕರ್ತರು ಜಮಾಯಿಸಿದ್ದರು.

ಶಿವಣ್ಣ ಯಾವ ಮಾತನ್ನೂ ಆಡದೇ ಅಲ್ಲಿಂದ ನಡೆದ. ಪತ್ರಕರ್ತರಿಗೆ ಸತ್ಯಕ್ಕಿಂತ ಸ್ಕೂಪ್‌ಗಳೇ ರುಚಿಸುತ್ತವೆ. ಹಾಗಾಗಿ ಅವನ ಹಿಂದೆ ಬೀಳಲಿಲ್ಲ. ಅವರಿಗೆ ಗೃಹ ಕಾರ್ಯದರ್ಶಿ ಅವರ ಹೇಳಿಕೆ ಬೇಕಿತ್ತು. ಯಾಕೆಂದರೆ ಅವರಿಗೆಲ್ಲ ಆಗಲೇ ಸುದ್ದಿ ಹೊಗಿತ್ತು. 'ಡ್ರೈವರ್ ಸಿಕ್ಕಿ ಬಿದ್ದಿದ್ದಾನೆ... ಭಾರೀ ಹಣ ಹಾಗೂ ಹತ್ತಾರು ಮೊಬೈಲ್‌ಗಳೊಂದಿಗೆ' ಎಂದು.

ಅರ್ಧ ಗಂಟೆಯಲ್ಲಿ ಇಡೀ ರಾಜ್ಯದಲ್ಲಿ ಒಂದೇ ಸುದ್ದಿ! 'ಸಿಡಿ ಹಗರಣದಿಂದ ಮುಜುಗರಗೊಂಡ ಗೃಹ ಕಾರ್ಯದರ್ಶಿ ರಾಜೀನಾಮೆ.'

'ಗೃಹ ಕಾರ್ಯದರ್ಶಿ ಅವರ ಡ್ರೈವರ್ ಒಂದು ಸಿಡಿ ಇಟ್ಟುಕೊಂಡು ಅವರನ್ನು ಬ್ಲಾಕ್‌ಮೇಲ್ ಮಾಡಲು ಪ್ರಯತ್ನಿಸಿದ್ದಾನೆ. ಅದಕ್ಕೆ ಸಂಬಂಧಿಸಿದಂತೆ ಅವರು ದೂರು ನೀಡಿದ್ದಾರೆ. ಗೃಹ ಕಾರ್ಯದರ್ಶಿಯಾಗಿ ಮುಂದುವರಿದರೆ ಪ್ರಕರಣದ ತನಿಖೆಯ ಮೇಲೆ ಪರಿಣಾಮ ಬೀರಬಹುದು ಎಂದು ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಸರ್ಕಾರ ಅವರ ರಾಜೀನಾಮೆಯನ್ನು ಪರಿಶೀಲಿಸಲಿದೆ' ಎಂದು ಸರ್ಕಾರ ಹೇಳಿಕೆ ನೀಡಿತು.

ಇದೆಲ್ಲದರ ನಡುವೆ ಆ ಡ್ರೈವರ್ ಅನ್ನು ಗೃಹ ಕಾರ್ಯದರ್ಶಿಯವರ ಮನೆಯಲ್ಲಿ ಯಾರಿಗೂ ತಿಳಿಯದಂತೆ ಬಿಟ್ಟುಬರಲಾಯಿತು. ಸುಮಾರು ಒಂದು ಗಂಟೆಯ ಬಳಿಕ ಅವನ ಬಂಧನದ ಸುದ್ದಿಯನ್ನು ಅಧಿಕೃತವಾಗಿ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಯಿತು.

**ಗಂಗಾಧರ ಎಸಿಪಿ ಶಿವಣ್ಣನ ವಾದ ಸರಣಿ ಕೇಳಿ ನುಡಿದ: 'ಕಮಿಷನರ್ ಅದನ್ನು ತಳ್ಳಿ ಹಾಕಿದರು. ಪ್ರೆಸ್‌ನವರಿಗೆ ಸಾಹೇಬರು ಕಂಪ್ಲೇಂಟ್ ಕೊಡಲು ಬರಲಿದ್ದಾರೆ ಎಂಬ ಸುದ್ದಿ ಹೇಗೆ ಸಿಕ್ಕಿತು ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರೆ ಈ ಪ್ರಕರಣದ ಇನ್ನೊಂದು ಮುಖದ ಪರಿಚಯ ಆಗಬಹುದು ಅನಿಸುತ್ತದೆ...'**

ಸ್ವತಃ ಕಮಿಷನರ್ ಸುದ್ದಿಗೋಷ್ಠಿ ಮಾಡಿ ಡ್ರೈವರ್ ಸೆರೆಸಿಕ್ಕಿದ್ದು, ಅವನ ಬಳಿ ಸಿಕ್ಕ ನಗದು ಹಣ ಹಾಗೂ ಮೊಬೈಲ್ ಬಗ್ಗೆ ಮಾತನಾಡಿದರು. ಒಂದು ಅತ್ಯಂತ ಕ್ಲಿಷ್ಟಕರ, ಸೂಕ್ಷ್ಮ ಪ್ರಕರಣವು ಸರಳವಾಗಿ ಹಾಗೂ ಬಹುಬೇಗನೆ ಅಂತ್ಯಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಎಲ್ಲ ಘಟನೆಗಳ ನಡುವೆ ಸಮಾಧಾನಗೊಳ್ಳದ ವ್ಯಕ್ತಿ—ಎಸಿಪಿ ಶಿವಣ್ಣ!

ಅವನದು ಒಂದೇ ಪ್ರಶ್ನೆ: 'ಇದೊಂದು ಪಕ್ಕಾ ಕ್ರಿಮಿನಲ್ ಕೇಸ್. ಇದನ್ನು ಯಾಕೆ ಸಿವಿಲ್ ಕೇಸ್ ಮಾಡಲಾಯಿತು?' ಎಂಬುದು.

ಡ್ರೈವರ್ ತಪ್ಪೊಪ್ಪಿಕೊಂಡ. ಎರಡೇ ದಿನಗಳಲ್ಲಿ ಚಾರ್ಜ್‌ಶೀಟ್ ಹಾಕಿ ಕೋರ್ಟ್‌ಗೆ ಹಾಜರು ಪಡಿಸಲಾಯಿತು. ಮೊದಲನೇ ಪಾರ್ಟಿ ಸ್ವತಃ ಗೃಹ ಕಾರ್ಯದರ್ಶಿ, ಎದುರು ಪಾರ್ಟಿ ಆರೋಪಿ ಡ್ರೈವರ್. ಆದರೆ, ಜಗದೀಶಚಂದ್ರರು ಕೋರ್ಟ್‌ನಲ್ಲಿ ಅವನ ಎಲ್ಲ ಅಪರಾಧ ಮನ್ನಿಸಿ